# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ, ೦೯, ಏಪ್ರಿಲ್, ೨೦೨೬(ಚೈತ್ರ, ೧೯, ಶಕವರ್ಷ, ೧೯೪೮)<br>BENGALURU, THURSDAY, 09, APRIL, 2026(CHAITHRA, 19, SHAKAVARSHA, 1948) | ನಂ. ೨೬೭<br>No. 267 |
|---|---|---|


**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 11 ಶಾಸನ 2026, ಬೆಂಗಳೂರು, ದಿನಾಂಕ:09.04.2026**

ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ವಿಧೇಯಕ, 2026 ಇದಕ್ಕೆ 2026ರ ಏಪ್ರಿಲ್ ತಿಂಗಳ 8ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2026ರ ಕರ್ನಾಟಕ ಅಧಿನಿಯಮ ಸಂಖ್ಯೆ:24 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ (ಭಾಗ-IVಎ)ರಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**2026ರ ಕರ್ನಾಟಕ ಅಧಿನಿಯಮ ಸಂಖ್ಯೆ: 24**

(2026ರ ಏಪ್ರಿಲ್ ತಿಂಗಳ 9ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ಅಧಿನಿಯಮ, 2026**

(2026ರ ಏಪ್ರಿಲ್ 8ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯದ ಪರವಾಗಿ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳು ಬಳಸುತ್ತಿರುವ ನಿಹಿತಗೊಳಿಸಿದ ಭೂಮಿಯ ರಕ್ಷಣೆ ಮತ್ತು ಸಕ್ರಮಾತಿಯನ್ನು ಉಪಬಂಧಿಸುವುದಕ್ಕಾಗಿ ಒಂದು ಅಧಿನಿಯಮ.

ಕರ್ನಾಟಕ ರಾಜ್ಯದ ಪರವಾಗಿ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳು ಬಳಸುತ್ತಿರುವ ನಿಹಿತಗೊಳಿಸಿದ ಭೂಮಿಯ ರಕ್ಷಣೆ ಮತ್ತು ಸಕ್ರಮಾತಿಯನ್ನು ಉಪಬಂಧಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಿದ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು:

(ಎ) “ಪ್ರಾಧಿಕಾರ” ಎಂದರೆ, ಶಾಲಾ ಶಿಕ್ಷಣ ಇಲಾಖೆ ಅಥವಾ ಶಾಲಾ ಶಿಕ್ಷಣ ಇಲಾಖೆ (ಪದವಿ-ಪೂರ್ವ) ಅಥವಾ ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ಗೊತ್ತುಪಡಿಸಿದ ಯಾವುದೇ ನಿಕಾಯ;

(ಬಿ) “ಸರ್ಕಾರಿ ಶೈಕ್ಷಣಿಕ ಸಂಸ್ಥೆ” ಎಂಬುದು ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಪ್ರಕರಣ 2(3)ರಡಿ ಪರಿಭಾಷಿಸಲಾದಂತೆ ಅನುಮೋದಿತ ಶಾಲೆಗಳು ಹಾಗೂ ಕರ್ನಾಟಕ ಶಾಲಾ ಶಿಕ್ಷಣ (ಪದವಿ ಪೂರ್ವ) (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ) ನಿಯಮಗಳು, 2024ರ 2ನೇ ನಿಯಮದ ಉಪ-ನಿಯಮ (5)ರಡಿ ಪರಿಭಾಷಿಸಲಾದಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಒಳಗೊಳ್ಳುವುದು; ಮತ್ತು

(ಸಿ) “ನಿಯಮಿಸಲಾದುದು” ಎಂದರೆ ಈ ಅಧಿನಿಯಮದಡಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು.

**3. ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳು ಬಳಸುತ್ತಿರುವ ಭೂಮಿಯನ್ನು ನಿಹಿತಗೊಳಿಸುವುದು.-**

(1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರಿ ಶೈಕ್ಷಣಿಕ ಸಂಸ್ಥೆಯು ಕನಿಷ್ಠ ಹನ್ನೆರಡು ವರ್ಷಗಳಿಂದ ಯಾವುದೇ ಸ್ಥಿರಾಸ್ತಿಯ ಮೇಲೆ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದ್ದರೆ, ಆ ಭೂಮಿಯು ಎಲ್ಲಾ ಋಣಭಾರಗಳು, ಕ್ಲೇಮುಗಳು ಅಥವಾ ಉತ್ತರಾಧಿಕಾರದ ಹಿತಾಸಕ್ತಿಗಳಿಂದ ಮುಕ್ತಗೊಂಡು, ರಾಜ್ಯ ಸರ್ಕಾರಿ ಅಥವಾ ಯುಕ್ತ ಪ್ರಾಧಿಕಾರದ ಪರವಾಗಿ ನಿಹಿತವಾಗಿರುವುದೆಂದು ಭಾವಿಸತಕ್ಕದ್ದು.

(2) ಅಂಥ ನಿಹಿತವಾಗಿರುವುದಕ್ಕೆ,-

(ಎ) ನೋಂದಾಯಿತ ವರ್ಗಾವಣೆ ದಸ್ತಾವೇಜಿನ ಅಲಭ್ಯತೆ;

(ಬಿ) ಉಯಿಲು ಮಾಡಿರುವ ಅಥವಾ ಉಯಿಲು ಮಾಡದಿರುವ ದಾನಿಯ ಮರಣ;

(ಸಿ) ಸ್ವತ್ತು ವರ್ಗಾವಣೆ ಅಧಿನಿಯಮ, 1882 (1882ರ ಕೇಂದ್ರ ಅಧಿನಿಯಮ 04) ಅಥವಾ ಭಾರತೀಯ ಉತ್ತರಾಧಿಕಾರ ಅಧಿನಿಯಮ, 1925 (1925ರ ಕೇಂದ್ರ ಅಧಿನಿಯಮ 39)ರ ಉಪಬಂಧಗಳ ಅನನುಪಾಲನೆಯು,

- ಪರಿಣಾಮ ಬೀರತಕ್ಕದ್ದಲ್ಲ.

**4. ಕಾನೂನಾತ್ಮಕ ಕ್ಲೇಮುಗಳು ಮತ್ತು ವ್ಯವಹರಣೆಗಳ ಮೇಲೆ ಪ್ರತಿಷೇಧ.-** (1) ಹನ್ನೆರಡು ವರ್ಷಗಳಿಗಿಂತ ಹೆಚ್ಚಿನ ಅವಧಿಯವರೆಗೆ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಸ್ವಾಧೀನಾನುಭವವು ಮುಂದುವರೆದಾಗ, ಆ ನಿಹಿತವಾದ ಭೂಮಿಯಲ್ಲಿ ಯಾರೇ ವ್ಯಕ್ತಿಯು ಕ್ಲೇಮು ಮಾಡಿದ ಯಾವುದೇ ಹಕ್ಕು, ಹಕ್ಕುಸ್ವಾಮ್ಯ ಅಥವಾ ಹಿತಾಸಕ್ತಿಗೆ ಸಂಬಂಧಿಸಿದಂತೆ ರಾಜ್ಯ ಅಥವಾ ಯಾವುದೇ ಪ್ರಾಧಿಕಾರದ ವಿರುದ್ಧ ದಾವೆ, ಅರ್ಜಿ, ಅಪೀಲು ಅಥವಾ ವ್ಯವಹರಣೆಯನ್ನು ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣದಲ್ಲಿ ಹೂಡತಕ್ಕದ್ದಲ್ಲ.

(2) ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಅಂಥ ಭೂಮಿಗಳ ಹಕ್ಕುಸ್ವಾಮ್ಯ ಅಥವಾ ಅನುಭೋಗಕ್ಕೆ ಸಂಬಂಧಿಸಿದ ಯಾವುದೇ ದಾವೆಯು ಬಾಕಿಯಿದ್ದರೆ, ಆರ್ಜನೆಯ ವ್ಯವ್ಯಹರಣೆಯಡಿ ಈಗಾಗಲೇ ಪರಿಹಾರವನ್ನು ನೀಡಿದ ಹೊರತು ತಕ್ಷಣವೇ ಮುಕ್ತಾಯಗೊಳ್ಳತಕ್ಕದ್ದು.

(3) ಉಪಪ್ರಕರಣ (1) ಮತ್ತು (2)ರಲ್ಲಿ ಏನೇ ಒಳಗೊಂಡಿದ್ದರೂ, ಯಾರೇ ವ್ಯಕ್ತಿಯು,-

(ಎ) ಪ್ರಶ್ನಿತ ಭೂಮಿಯ ನೋಂದಾಯಿತ ಹಕ್ಕುಸ್ವಾಮ್ಯದ ದಸ್ತಾವೇಜು ಹೊಂದಿರುವುದು, ಮತ್ತು

(ಬಿ) ಭೂಮಿಯನ್ನು ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಬಳಕೆಗೆ ಯಾವುದೇ ಕಾರಣಕ್ಕೂ ಸ್ವ-ಇಚ್ಛೆಯಿಂದ ನೀಡಿರುವುದಿಲ್ಲವೆಂದು ದಸ್ತಾವೇಜಿನ ಸಾಕ್ಷ್ಯದ ಮೂಲಕ ಸಾಬೀತುಪಡಿಸಿ, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ 30 ದಿನಗಳೊಳಗಾಗಿ ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮುಂದೆ ಕ್ಲೇಮನ್ನು ಸಲ್ಲಿಸಬಹುದು.

(4) ಕ್ಲೇಮನ್ನು ಸ್ಥಿರೀಕರಿಸಿದಲ್ಲಿ, ರಾಜ್ಯ ಸರ್ಕಾರವು ನಿಯಮಿಸಬವುದಾದಂತೆ ಪರ್ಯಾಯ ಭೂಮಿ ಅಥವಾ ನಿಹಿತಗೊಂಡಿರುವುದರಿಂದ ಭಾಗಶಃ ವಿನಾಯಿತಿಯನ್ನು ಒಳಗೊಂಡಂತೆ ಸೂಕ್ತ ಪರಿಹಾರಾತ್ಮಕ ಕ್ರಮವನ್ನು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಶಿಫಾರಸ್ಸು ಮಾಡಬಹುದು.

**5. ಸಾರ್ವಜನಿಕ ಉದ್ದೇಶದ ಬಳಕೆಯ ಪೂರ್ವಭಾವನೆ.-** (1) ಸಮುದಾಯದ ತಿಳುವಳಿಕೆಯಲ್ಲಿ ಮತ್ತು ಹನ್ನೆರಡು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಯಾವುದೇ ಆಕ್ಷೇಪಣೆಯಿಲ್ಲದೆ ಭೂಮಿಯನ್ನು ನಿರಂತರವಾಗಿ ಶೈಕ್ಷಣಿಕ ಉದ್ದೇಶಗಳಿಗಾಗಿ ಬಳಸಿದಲ್ಲಿ, ಅಂಥ ಬಳಕೆಯು ಸಿಂಧುವಾದ ಮತ್ತು ಹಿಂತೆಗೆದುಕೊಳ್ಳಲಾಗದ ಸಾರ್ವಜನಿಕ ಸಮರ್ಪಣೆ ಎಂಬುದಾಗಿ ಪೂರ್ವಭಾವಿತವಾಗತಕ್ಕದ್ದು.

(2) ದಸ್ತಾವೇಜಿನ ಪುರಾವೆಯ ಅಲಭ್ಯತೆಯು ಸಾರ್ವಜನಿಕ ಉದ್ದೇಶದ ಬಳಕೆಯ ಪೂರ್ವಭಾವನೆಯನ್ನು ಅಲ್ಲಗಳೆಯತಕ್ಕದ್ದಲ್ಲ.

**6. ಸ್ವಯಂಕೃತ ನಿರ್ಬಂಧ ಮತ್ತು ಅನುಚಿತ ವಿಳಂಬ.-** ವ್ಯಕ್ತಿಯು ಅಥವಾ ಆತನ ಪೂರ್ವದ ಹಕ್ಕುದಾರರು, ಸರ್ಕಾರಿ ಶಿಕ್ಷಣ ಸಂಸ್ಥೆಯ ಉದ್ದೇಶಗಳಿಗಾಗಿ ಭೂಮಿಯ ಬಳಕೆಯನ್ನು ತಿಳಿದಿದ್ದೂ ಸಮ್ಮತಿಸಿದ್ದರೆ ಮತ್ತು ಯುಕ್ತ ಸಮಯದೊಳಗೆ ಆಕ್ಷೇಪಿಸಲು ವಿಫಲರಾಗಿದ್ದರೆ, ಆ ವ್ಯಕ್ತಿಯು ಸರ್ಕಾರಿ ಶಿಕ್ಷಣ ಸಂಸ್ಥೆಯ ಭೂಮಿಯ ಮೇಲೆ ಹಕ್ಕನ್ನು ಪ್ರತಿಪಾದಿಸಲು ಅರ್ಹನಾಗಿರತಕ್ಕದ್ದಲ್ಲ.

**7. ಭೂಮಿಯ ನೋಂದಣಿ ಮತ್ತು ನಿಹಿತ ಪ್ರಮಾಣ ಪತ್ರ.-** (1) ರಾಜ್ಯ ಸರ್ಕಾರವು, 8ನೇ ಪ್ರಕರಣದಡಿ ಗೊತ್ತುಪಡಿಸಲಾದ ಎಸ್ಟೇಟ್ ಅಧಿಕಾರಿಯ ಮೂಲಕ, ಈ ಅಧಿನಿಯಮದಡಿ ನಿಹಿತವಾಗಿರುವುದಾಗಿ ಭಾವಿಸಲಾದ ಭೂಮಿಗಳ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು.

(2) ನಿಹಿತ ಪ್ರಮಾಣಪತ್ರವನ್ನು,-

(ಎ) ಸಾರ್ವಜನಿಕ ನೋಟೀಸನ್ನು ಪಂಚಾಯತಿ ಮತ್ತು ತಾಲ್ಲೂಕು ಕಚೇರಿಗಳಲ್ಲಿ ವ್ಯಾಪಕ ಪ್ರಸಾರದಲ್ಲಿರುವ ಸ್ಥಳೀಯ ಭಾಷೆಯ ಕನಿಷ್ಟ ಎರಡು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿದ ಹೊರತು;

(ಬಿ) ಅರವತ್ತು ದಿನಗಳ ಅವಧಿಯೊಳಗೆ ಆಕ್ಷೇಪಣೆಗಳನ್ನು ಆಹ್ವಾನಿಸಿದ ಮತ್ತು ತಿಳಿಸಿದ ಹೊರತು;

(ಸಿ) ಪ್ರಕರಣ 9ರಡಿ ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮುಂದೆ ಆಕ್ಷೇಪಣಾದಾರರಿಗಾಗಿ ಕ್ಷಿಪ್ರಕ್ರಮದ (summary) ವಿಚಾರಣೆಯನ್ನು ನಡೆಸಿದ ಹೊರತು;

- ಹೊರಡಿಸತಕ್ಕದ್ದಲ್ಲ.

(3) ಯುಕ್ತ ಪ್ರಾಧಿಕಾರವು ಪ್ರತಿಯೊಂದು ಸ್ವತ್ತಿಗೆ, ಎಲ್ಲಾ ಉದ್ದೇಶಗಳಿಗಾಗಿ ಹಕ್ಕಿನ ನಿರ್ಣಾಯಕ ಸಾಕ್ಷ್ಯದಂತೆ ಜಾರಿಗೊಳಿಸತಕ್ಕ, ನಿಹಿತ ಪ್ರಮಾಣಪತ್ರವನ್ನು ಹೊರಡಿಸತಕ್ಕದ್ದು.

**8. ಎಸ್ಟೇಟ್ ಅಧಿಕಾರಿಯ ನೇಮಕಾತಿ ಮತ್ತು ಅಧಿಕಾರಗಳು.-** (1) ಕ್ಷೇತ್ರ ಶಿಕ್ಷಣಾಧಿಕಾರಿ (BEO) ಮತ್ತು ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ (DDPU) ಇವರನ್ನು ಈ ಅಧಿನಿಯಮದ

ಉದ್ದೇಶಗಳಿಗಾಗಿ ಅವರ ಅಧಿಕಾರವ್ಯಾಪ್ತಿಯೊಳಗಿನ ಎಲ್ಲಾ ಸರ್ಕಾರಿ ಶಿಕ್ಷಣ ಸಂಸ್ಥೆಯ ಭೂಮಿಗಳ ಸಂಬಂಧದಲ್ಲಿ ಎಸ್ಟೇಟ್ ಅಧಿಕಾರಿ ಎಂಬುದಾಗಿ ಭಾವಿಸತಕ್ಕದ್ದು.

(2) ಎಸ್ಟೇಟ್ ಅಧಿಕಾರಿಯು,-

(ಎ) ಎಲ್ಲಾ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳ ಸ್ವತ್ತುಗಳ ನಿಖರ ಮತ್ತು ಇತ್ತೀಚಿನ ಭೂ ದಾಖಲೆಗಳನ್ನು ನಿರ್ವಹಿಸಲು;

(ಬಿ) ಅಂಥ ಭೂಮಿಗಳ ಒತ್ತುವರಿ, ದುರುಪಯೋಗ ಅಥವಾ ಪರಭಾರೆಯ ಮೇಲ್ವಿಚಾರಣೆಯನ್ನು ಮಾಡಲು;

(ಸಿ) ಅನುಸೂಚಿತ ಬುಡಕಟ್ಟುಗಳ ಮತ್ತು ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, 2006 (2007ರ ಕೇಂದ್ರ ಅಧಿನಿಯಮ 2)ನಂತಹ ಧಾರ್ಮಿಕ ಸಂಸ್ಥೆ ಭೂಮಿಗಳನ್ನು ವಿಶೇಷ ಕಾನೂನುಗಳ ಮೂಲಕ ನಿಯಂತ್ರಿಸುವುದಕ್ಕಾಗಿ ಜವಾಬ್ದಾರಿ ಹೊಂದಿರುವ ಇಲಾಖೆಗಳಾದ ಅರಣ್ಯ ಇಲಾಖೆ, ವಕ್ಫ್ ಮಂಡಳಿಗಳನ್ನು ಒಳಗೊಂಡಂತೆ ಆದರೆ ಅವುಗಳಿಗೆ ಸೀಮಿತಗೊಳಿಸದೆ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಕಂದಾಯ ಇಲಾಖೆ ಮತ್ತು ಇತರ ಸಂಬಂಧಿತ ಪ್ರಾಧಿಕಾರಗಳೊಂದಿಗೆ ಸಮನ್ವಯ ಅಥವಾ ರಕ್ಷಣೆ ಅಥವಾ ಸರ್ಕಾರಿ ಶೈಕ್ಷಣಿಕ ಸಂಸ್ಥೆ ಭೂಮಿಗಳನ್ನು ಮರಳಿ ಪಡೆಯಲು; ಮತ್ತು

(ಡಿ) ನಿಹಿತ ಪ್ರಮಾಣ ಪತ್ರಗಳನ್ನು ಸಿದ್ಧಪಡಿಸಲು ಮತ್ತು ಪರಿಶೀಲಿಸುವುದಕ್ಕಾಗಿ ಪ್ರಾಧಿಕಾರಕ್ಕೆ ನೆರವು ನೀಡಲು,

- ಜವಾಬ್ದಾರನಾಗಿರತಕ್ಕದು.

(3) ಎಸ್ಟೇಟ್ ಅಧಿಕಾರಿಯು, ಲಿಖಿತ ಸಂವಹನದ ಮೂಲಕ ತಹಶೀಲ್ದಾರರಿಗೆ,-

(ಎ) ಭೂಮಿಯ ಸರ್ವೆಗಳನ್ನು ಮತ್ತು ಗಡಿ ಗುರುತಿಸುವಿಕೆಯನ್ನು ನಡೆಸುವಂತೆ;

(ಬಿ) ಶಾಸನಬದ್ಧ ನಿಹಿತವನ್ನು ತೋರಿಸುವ ಕಂದಾಯ ದಾಖಲೆಗಳನ್ನು ಇಂದೀಕರಿಸುವಂತೆ; ಮತ್ತು

(ಸಿ) ಸಂಬಂಧಪಟ್ಟ ಭೂ ಕಾನೂನುಗಳಡಿ ಹೊರಹಾಕುವ ಅಥವಾ ರಕ್ಷಿಸುವ ಕ್ರಮಗಳನ್ನು ಕೈಗೊಳ್ಳುವಂತೆ,

-ಕೋರಬಹುದು.

(4) ಎಸ್ಟೇಟ್ ಅಧಿಕಾರಿಯು, ಅನುಸೂಚಿತ ಬುಡಕಟ್ಟುಗಳ ಮತ್ತು ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳ ಮಾನ್ಯತೆ) ಅಧಿನಿಯಮ, 2006 (2007ರ ಕೇಂದ್ರ ಅಧಿನಿಯಮ 2)ನಂತಹ ಅಥವಾ ಧಾರ್ಮಿಕ ಸಂಸ್ಥೆ ಭೂಮಿಗಳನ್ನು ವಿಶೇಷ ಕಾನೂನುಗಳ ಮೂಲಕ ನಿಯಂತ್ರಿಸುವುದಕ್ಕಾಗಿ ಜವಾಬ್ದಾರಿ ಹೊಂದಿರುವ ಇಲಾಖೆಗಳಾದ ಅರಣ್ಯ ಇಲಾಖೆ, ವಕ್ಫ್ ಮಂಡಳಿಗಳನ್ನು ಒಳಗೊಂಡಂತೆ ಆದರೆ ಅವುಗಳಿಗೆ ಸೀಮಿತಗೊಳಿಸದೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ ಮತ್ತು ಇತರ ಸಂಬಂಧಿತ ಪ್ರಾಧಿಕಾರಗಳ ಮೂಲಕ ನಿಯಮಿಸಬಹುದಾದಂತೆ ತಪಾಸಣೆಯನ್ನು ನಡೆಸುವುದಕ್ಕಾಗಿ ಸಂಬಂಧಪಟ್ಟ ದಾಖಲೆಗಳು ಲಭ್ಯವಾಗುವಂತೆ ಮಾಡತಕ್ಕದ್ದು.

**9. ಕುಂದುಕೊರತೆ ನಿವಾರಣಾ ಪ್ರಾಧಿಕಾರ.-** (1) ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12)ರಡಿ ರಚಿಸಲಾದ ಕಂದಾಯ

ನ್ಯಾಯಾಲಯವು ಈ ಅಧಿನಿಯಮದ ಉದ್ದೇಶಕ್ಕಾಗಿ ಕುಂದುಕೊರತೆ ನಿವಾರಣಾ ಪ್ರಾಧಿಕಾರವಾಗಿರತಕ್ಕದ್ದು.

(2) ನಿಹಿತ ಪ್ರಮಾಣ ಪತ್ರ ಅಥವಾ ಅದರ ನಿರಾಕರಣೆಯಿಂದ ಭಾದಿತನಾದ ಯಾರೇ ವ್ಯಕ್ತಿಯು, ಅಂಥ ಆದೇಶದ ದಿನಾಂಕದಿಂದ 30 ದಿನಗಳ ಅವಧಿಯೊಳಗಾಗಿ ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಮುಂದೆ ಮನವಿಯನ್ನು ಸಲ್ಲಿಸಬಹುದು.

(3) ಕುಂದುಕೊರತೆ ನಿವಾರಣಾ ಪ್ರಾಧಿಕಾರವು 60 ದಿನಗಳ ಅವಧಿಯೊಳಗಾಗಿ ವಿಷಯವನ್ನು ಸಮರ್ಥನೆಯುಕ್ತ ಆದೇಶದೊಂದಿಗೆ ವಿಲೇವಾರಿ ಮಾಡತಕ್ಕದ್ದು.

**10. ನ್ಯಾಯಾಧಿಕರಣಕ್ಕೆ ಅಪೀಲು.-** (1) ಕುಂದುಕೊರತೆ ನಿವಾರಣಾ ಪ್ರಾಧಿಕಾರದ ನಿರ್ಣಯದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಕರ್ನಾಟಕ ಅಪೀಲು ನ್ಯಾಯಾಧಿಕರಣ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 10)ರಡಿ ರಚಿಸಲಾದ ಕರ್ನಾಟಕ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು ಸಲ್ಲಿಸಬಹುದು.

(2) ಕುಂದುಕೊರತೆ ನಿವಾರಣಾ ಪ್ರಾಧಿಕಾರದ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ 30 ದಿನಗಳ ಅವಧಿಯೊಳಗಾಗಿ ಅಪೀಲನ್ನು ದಾಖಲಿಸತಕ್ಕದ್ದು.

**11. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲಿನ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಭಾದಕವಾಗದಂಥ ನಿಯಮಗಳನ್ನು ಉಪಬಂಧಿಸಬಹುದು,-

(ಎ) ಸರ್ಕಾರಿ ಶಿಕ್ಷಣ ಸಂಸ್ಥೆಯು ಬಳಸುತ್ತಿರುವ ಭೂಮಿಗಳನ್ನು ಗುರುತಿಸಲು ಮತ್ತು ಸರ್ವೇ ನಡೆಸುವ ಕಾರ್ಯವಿಧಾನ;

(ಬಿ) ಭೂಮಿಯ ರಿಜಿಸ್ಟರುಗಳ ನಿರ್ವಹಣೆ;

(ಸಿ) ನಿಯಮಿಸಬಹುದಾದಂತೆ ನಿಹಿತ ಪ್ರಮಾಣಪತ್ರಗಳು ಮತ್ತು ಸಾರ್ವಜನಿಕ ನೋಟೀಸಿನ ನಮೂನೆಗಳು; ಮತ್ತು

(ಡಿ)ಈ ಅಧಿನಿಯಮವು ಉಪಬಂಧಗೊಳಿಸದಿರುವ ಅಥವಾ ಅಸಮರ್ಪಕ ಉಪಬಂಧನ್ನು ಮಾಡಿ ವ ಮತ್ತು ರಾಜ್ಯ ಸರ್ಕಾರವು ಈ ಅಧಿನಿಯಮದ ಯುಕ್ತ ಅನುಷ್ಠಾನಕ್ಕಾಗಿ ಅಗತ್ಯವೆಂದು ಅಭಿಪ್ರಾಯ ನೀಡಿರುವ ಉಪಬಂಧಗಳ ಸಂಬಂಧದಲ್ಲಿ ಈ ಅಧಿನಿಯಮವು ನಿಯಮಿಸಬೇಕಾಗಿರುವಂತೆ ಸ್ಪಷ್ಟವಾಗಿ ಅಗತ್ಯವಿರುವ ಅಥವಾ ಅನುಮತಿಸುವ ಎಲ್ಲಾ ವಿಷಯಗಳು.

(3)ಈ ಅಧಿನಿಯಮದಡಿ ರಚಿಸಿರುವ ಯಾವುದೇ ನಿಯಮವು ಪೂರ್ವಾನ್ವಯವಾಗಿ ಜಾರಿಯಾಗತಕ್ಕದ್ದು ಮತ್ತು ಅಂಥ ನಿಯಮವನ್ನು ರಚಿಸಿದಾಗ, ನಿಯಮಗಳನ್ನು ರಚಿಸುವುದಕ್ಕಾಗಿ ಕಾರಣಗಳನ್ನು ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸಬೇಕಾದ ಹೇಳಿಕೆಯಲ್ಲಿ ನಿರ್ದಿಷ್ಟಪಡಿಸತಕ್ಕದ್ದು ಹಾಗೂ ಉಪ-ಪ್ರಕರಣ (4)ರಡಿ ಮಾಡಲಾದ ಯಾವುದೇ ಮಾರ್ಪಾಡಿಗೆ ಒಳಪಟ್ಟು, ಈ ಅಧಿನಿಯಮದಡಿ ರಚಿಸಲಾದ ಪ್ರತಿಯೊಂದು ನಿಯಮವು ಈ ಅಧಿನಿಯಮವನ್ನು ಅಧಿನಿಯಮಿತಿಗೊಳಿಸಿದ ರೀತಿಯಲ್ಲೇ ಜಾರಿಗೊಳಿಸತಕ್ಕದ್ದು.

(4) ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ,

ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚಿನ ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಗಳ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಉಭಯ ಸದನಗಳೂ ಒಪ್ಪಿದರೆ ಅಥವಾ ಆ ನಿಯಮ ಅಥವಾ ಅಧಿಸೂಚನೆಯ ಮಾಡಕೂಡದೆಂದು ಉಭಯ ಸದನಗಳೂ ಒಪ್ಪಿದರೆ, ಆ ನಿಯಮದತರುವಾಯ, ಆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಯಾವುದೇ ಪರಿಣಾಮ ಹೊಂದಿರತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕೃತ್ಯದ ಮಾನ್ಯತೆಗೆ ಬಾಧಕವಾಗತಕ್ಕದ್ದಲ್ಲ.

**12. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮದಡಿ ಸದ್ಭಾವನೆಯಿಂದ ಮಾಡಲಾದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಸರ್ಕಾರ ಅಥವಾ ಯಾರೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**13. ಅಧ್ಯಾರೋಹಿ ಪರಿಣಾಮ.-** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಸಂಗತವಾಗಿರುವುದು ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಉಪಬಂಧಗಳು ಪರಿಣಾಮವನ್ನು ಹೊಂದಿರತಕ್ಕದ್ದು.

**14. ತೊಂದರೆಗಳ ನಿವಾರಣೆಗೆ ಅಧಿಕಾರ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಅಥವಾ ಆದೇಶದ ಮೂಲಕ ತೊಂದರೆಯ ನಿವಾರಣೆಗಾಗಿ ಅವಶ್ಯಕ ಹಾಗೂ ಸಮಂಜಸವೆಂದು ತನಗೆ ಕಂಡುಬರುವಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಈ ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

**ಜಿ. ಶ್ರೀಧರ್**
**ಸರ್ಕಾರದ ಕಾರ್ಯದರ್ಶಿ**
**ಸಂಸದೀಯ ವ್ಯವಹಾರಗಳು ಮತ್ತು**
**ಶಾಸನ ರಚನೆ ಇಲಾಖೆ.**

# PARLIAMENTARY AFFAIRS AND LEGISLATION SECRETARIAT NOTIFICATION

**NO. DPAL 11 SHASANA 2026, BENGALURU, DATED:09.04.2026**

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ಅಧಿನಿಯಮ, 2026 (2026ರ ಕರ್ನಾಟಕ ಅಧಿನಿಯಮ ಸಂಖ್ಯೆ:24)ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ-IVಎ) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.-

## KARNATAKA ACT NO. 24 OF 2026

(First Published in the Karnataka Gazette Extra-ordinary on the 9th day of April, 2026)

### THE KARNATAKA GOVERNMENT EDUCATIONAL INSTITUTION'S LANDS (PROTECTION AND REGULARISATION) ACT, 2026

(Received the assent of the Governor on the 8th day of April, 2026)

An Act to provide protection and regularisation of the land vested and used by Government Educational Institutions in favour of the State Government.

Whereas it is expedient to provide protection and regularisation of the land vested and used by Government Educational Institutions in favour of the State Government and for the matters connected therewith or incidental there to;

Be it enacted by the Karnataka State Legislature in the seventy seventh year of the Republic of India, as follows:-

**1. Short title and commencement.-** (1) This Act may be called the Karnataka Government Educational Institution's Lands (Protection and Regularisation) Act, 2026.

(2) It shall come into force on such date as the State Government may, by notification in the Official Gazette, appoint.

**2. Definitions.-** In this Act, unless the context otherwise requires,

(a) "Authority" means the Department of School Education or Department of School Education (Pre-University) or anybody designated by the State Government for the purposes of this Act.

(b) "Government Educational Institution" includes approved schools as defined under section 2(3) of the Karnataka Education Act, 1983 and Government Pre-University College as defined under sub-rule (5) of rule 2 of The Karnataka Department of School Education (Pre-University) (Academic, Registration, Administration and Grant-in-aid etc.) Rules, 2024; and

(c) "Prescribed" means prescribed by rules made under this Act.

**3. Vesting of Land Used by Government Educational Institutions.-** (1) Notwithstanding anything contained in any other law for the time being in force,

if a Government Educational Institution has functioned continuously on any immovable property for at least twelve years, the land shall be deemed to be vested in favour of the State Government or the appropriate Authority, free from all encumbrances, claims or reversionary interests.

(2) Such vesting shall not be affected by,-

(a) the absence of a registered document of transfer;

(b) the death of the donor, whether testate or intestate; and

(c) non-compliance with the provisions of the Transfer of Property Act, 1882 (Central Act 04 of 1882) or the Indian Succession Act, 1925. (Central Act 39 of 1925).

**4. Bar on Legal Claims and Proceedings**.- (1) No suit, application, appeal or proceeding shall lie in any court or tribunal against the State or any Authority regarding any right, title or interest claimed by a person in vested land, where the occupation by the Government Educational Institution has continued for more than twelve years.

(2) Any suit pending on the date of commencement of this Act, relating to the title or possession of such Government Educational Institution lands, shall cease immediately unless compensation has already been awarded under an acquisition proceeding.

(3) Notwithstanding anything contained in sub-sections (1) and (2), any person who,-

(a) holds a registered title document for the land in question, and

(b) can prove by documentary evidence that the land was never voluntarily given for Government Educational Institution use, may file a claim before the Grievance Redressal Authority within thirty days from the date of commencement of this Act.

(4) If the claim is upheld, the Grievance Redressal Authority may recommend appropriate remedial action including land substitution or partial exemption from vesting, as may be prescribed by the State Government.

**5. Presumption of Public Purpose Use.-** (1) If the land has been used continuously for educational purposes with the knowledge of the community and without objection for more than twelve years, such use shall be presumed to be a valid and irrevocable public dedication.

(2) The absence of documentary proof shall not negate the presumption of public purpose use.

**6. Estoppel and laches**.- A person shall not be entitled to assert a claim over Government educational institution land if he or his predecessor-in-title knowingly acquiesced to the use of the land for Government Educational Institution purposes and failed to object within a reasonable time.

**7. Land register and vesting certificate.-** (1) The State Government, through the Estate Officer designated under section 8, shall maintain a register of lands deemed to be vested under this Act.

(2) No vesting certificate shall be issued unless:

(a) a public notice has been published in atleast two newspapers in vide circulation in the local language at the panchayat and taluk offices;

(b) objections have been invited and addressed within a period of sixty days; and

(c) a summary hearing is held for objectors before the Grievance, Redressal Authority under section 9.

(3) The appropriate Authority shall issue a Vesting Certificate for each property, which shall serve as conclusive evidence of title for all purposes.

**8. Appointment and Powers of Estate Officer.-** (1) The Block Education Officer (BEO) and the Deputy Director of Pre-University Education (DDPU) shall be deemed to be the Estate Officer for the purposes of this Act in respect of all Government Educational Institution lands within his jurisdiction.

(2) The Estate Officer shall be responsible for,-

(a) maintaining accurate and up-to-date land records of all Government Educational Institution properties;

(b) monitoring encroachments, misuse or alienation of such lands;

(c) coordinating with the Rural Development and Panchayat Raj Department, Urban Development Department, Revenue Department and other related authorities, including but not limited to the Forest Department, the Wakf Board and departments responsible for lands governed by special laws such as the Scheduled Tribes and Other Traditional Forest Dwellers (Recognition of Forest Rights) Act, 2006 (Central Act 02 of 2007) or religious institution lands, for the purpose of demarcation, protection or recovery of Government Educational Institution land; and

(d) assisting the Authority in the preparation and verification of Vesting Certificates.

(3) The Estate Officer may, by written communication, request the Tahsildar to,-

(a) conduct land surveys and demarcation;

(b) update revenue records to reflect statutory vesting; and

(c) initiate eviction or protection measures under the relevant land laws.

(4) The Estate Officer shall make all relevant records available for inspection by the School Education and, Literacy Department, Revenue Department, Rural Development and Panchayat Raj Department, Urban Development Department and other related authorities, including but not limited to the Forest Department, the

Wakf Board and departments responsible for lands governed by special laws such as the Scheduled Tribes and Other Traditional Forest Dwellers (Recognition of Forest Rights) Act, 2006 (Central Act 02 of 2007) or religious institution lands, as may be prescribed.

**9. Grievance Redressal Authority.-** (1) The Revenue Court constituted under the Karnataka Land Revenue Act, 1964 (Karnataka Act 12 of 1964) shall be the Grievance Redressal Authority for the purposes of this Act.

(2) Any person aggrieved by a Vesting Certificate or its denial, may file a representation before the Grievance Redressal Authority within a period of 30 days from the date of such order.

(3) The Grievance Redressal Authority shall dispose of the matter within a period of 60 days, with reasoned orders.

**10. Appeals to the Tribunal.-** (1) Any person aggrieved by the decision of the Grievance Redressal Authority may appeal to the Karnataka Appellate Tribunal, constituted under the Karnataka Appellate Tribunal Act, 1976 (Karnataka Act 10 of 1976).

(2) The appeal must be filed within a period of 30 days from the date of receipt of the order of the Grievance Redressal Authority.

**11. Powers to make rules.-** (1) The State Government, may, by notification, make rules to carry out the provisions of this Act.

(2) In particular and without prejudice to the generality of the foregoing provision, such rules may provide for,-

(a) procedure for identifying and surveying lands used by Government Educational Institution;

(b) maintenance of land registers;

(c) formats for Vesting Certificates and public notices shall be as may be prescribed ; and

(d) all matters expressly required or allowed by this Act to be prescribed or in respect of which this Act makes no provision or makes insufficient provision and a provision is, in the opinion of the State Government, necessary for the proper implementation of this Act.

(3) Any rule made under this Act may be made with retrospective effect and when such a rule is made, the reasons for making the rule shall be specified in a statement to be laid before both the Houses of the State Legislature and subject to any modification made under sub-section (4), every rule made under this Act shall have effect as if it is enacted in the Act.

(4) Every rule made under this Act shall be laid as soon as may be before each House of the State Legislature while it is in Session for a total period of thirty days, which may be comprised in one Session or in two or more successive Sessions and if, before the expiry of the Session in which it is so laid or the Session immediately following both Houses agree in making any modification in the file or

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



decide that any rule should not be made, the rule shall thereafter have effect only in such modified form or be of no effect, as the case may be, so, however, that any such modification or annulment shall be without prejudice to the validity of anything previously done under that rule.

**12. Protection of Action Taken in Good Faith.-** No suit, prosecution or other legal proceeding shall lie against the Government or any officer or authority for anything which is in good faith done or intended to be done! under this Act.

**13. Overriding Effect.-** The provisions of this Act shall have effect notwithstanding anything inconsistent therewith contained in any other law for the time being in force.

**14. Power to remove difficulties.-** (1) If any difficulty arises in giving effect to the provisions of this Act, the State Government may, by order published in the Official Gazette, make such provisions, not inconsistent with the provisions of this Act, as may be necessary or expedient for removing the difficulty:

Provided that, no order under this section shall be made after expiry of two years from the date of commencement of this Act.

(2) Every order made under this section shall, as soon as may be after its so made, be laid before both the Houses of the State Legislature.

The above translation of ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಯ ಭೂಮಿಗಳ (ರಕ್ಷಣೆ ಮತ್ತು ಸಕ್ರಮಾತಿ) ಅಧಿನಿಯಮ, 2026 (2026ರ ಕರ್ನಾಟಕ ಅಧಿನಿಯಮ ಸಂಖ್ಯೆ:24) be Published in official Gazette under clause (3) of Article 348 of the Constitution of India.

THAAWARCHAND GEHLOT
GOVERNOR OF KARNATAKA

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH